**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ:**

*****************************************************************************************

**ಸೂಚನೆ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿರುವುದರಿಂದ, ಜಿಲ್ಲೆಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳು ನಿಂತುಹೋಗಿ ತೀವ್ರ ತೊಂದರೆಯಾಗಿದೆ. ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ಕೆಂಪು ಕಲ್ಲು, ಜಲ್ಲಿ, ಮರಳು ಬೇಡಿಕೆಗನುಗುಣವಾಗಿ ಪೂರೈಕೆಯಾಗದೆ ಇರುವುದರಿಂದ ಜಿಲ್ಲೆಯಲ್ಲಿ ಇಡೀ ಕಟ್ಟಡ ನಿರ್ಮಾಣ ಕ್ಷೇತ್ರವೇ ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆಯಲ್ಲಿ ಪ್ರಸ್ತುತ ಉಂಟಾಗಿರುವ ವ್ಯತ್ಯಯವನ್ನು ಹೋಗಲಾಡಿಸಿ, ಬೇಡಿಕೆಗನುಗುಣವಾಗಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆಗೆ ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಕ್ರಮವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖಾ ಸಚಿವರನ್ನು ಗಮನ ಸೆಳೆಯುತ್ತೇನೆ.

**ಉತ್ತರ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿರುವುದಿಲ್ಲ. ಆದರೆ ಪೂರೈಕೆಯಲ್ಲಿ ಅಲ್ಪ ಪ್ರಮಾಣದಲ್ಲಿ ವ್ಯತ್ಯಯ ಉಂಟಾಗಿರುವುದಾಗಿ ತಿಳಿದು ಬಂದಿರುತ್ತದೆ. ಈ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

- **ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕಟ್ಟಡ ಕಲ್ಲು ಪೂರೈಕೆ ಸಂಬಂಧ :-**

➢ ಕಟ್ಟಡ ಕಲ್ಲು ಗಣಿಗಾರಿಕೆಗೆ 108 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.

➢ ಸ್ಟೋನ್ ಕ್ರಷರ್‌ಗಳ ಕಾರ್ಯಾಚರಣೆಗಾಗಿ 64 ಲೈಸೆನ್ಸ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ.

➢ ಸದರಿ ಕಲ್ಲುಗಣಿ ಗುತ್ತಿಗೆಗಳ ಪರಿಸರ ಅನುಮತಿ ಪತ್ರದಲ್ಲಿನ ವಾರ್ಷಿಕ ಉಪಖನಿಜ ಉತ್ಪಾದನೆ ಪ್ರಮಾಣವು 56,45,659 ಮೆಟ್ರಿಕ್ ಟನ್ ಗಳಾಗಿರುತ್ತದೆ.

➢ ಸದರಿ ಕಟ್ಟಡ ಕಲ್ಲುಗಣಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 17,19,915 ಮೆಟ್ರಿಕ್ ಟನ್ ಮತ್ತು 2025-26 ನೇ ಸಾಲಿನಲ್ಲಿ 3,93,928 ಮೆಟ್ರಿಕ ಟನ್ ಕಟ್ಟಡ ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.

- **ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕೆಂಪು ಕಲ್ಲು ಪೂರೈಕೆ ಸಂಬಂಧ :-**

➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ-32 ರಡಿ ಖಾಸಗಿ / ಪಟ್ಟಾ ಜಮೀನುಗಳಲ್ಲಿ ಕೆಂಪು ಕಲ್ಲುಗಣಿಗಾರಿಕೆಗೆ (ಲ್ಯಾಟರೈಟ್ 'ಎ' ಗ್ರೇಡ್ ಅಥವಾ ಕೈಗಾರಿಕಾ ಉದ್ದೇಶ) 19 ಗಣಿ ಗುತ್ತಿಗೆ ಲೈಸನ್ಸ್‌ಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿದ್ದು, ಸದರಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 1,14,539 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 5,11,912 ಮೆಟ್ರಿಕ್ ಟನ್ ಕೆಂಪು ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.

- ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-3-A(a) ಮತ್ತು 3-A(b) ರಡಿ ಹಲವು ಉದ್ದೇಶಗಳಿಗೆ ಅನುಮತಿ ನೀಡಲು ಅವಕಾಶವಿರುತ್ತದೆ. ಅದರಂತೆ ಪಟ್ಟಾ/ ಖಾಸಗಿ ಜಮೀನುಗಳನ್ನು ಕೃಷಿಯೋಗ್ಯ ಜಮೀನುಗಳನ್ನಾಗಿ (ಸಮತಟ್ಟು) ಪರಿವರ್ತಿಸಿಕೊಳ್ಳಲು ಅನುಮತಿ ನೀಡಲಾಗುತ್ತಿದ್ದು, ಅದರಂತೆ ಜಮೀನುಗಳನ್ನು ಪರಿವರ್ತಿಸಿಕೊಳ್ಳುವ ಸಂದರ್ಭದಲ್ಲಿ ಕೆಂಪು ಕಲ್ಲುಗಳ (ಲ್ಯಾಟರೈಟ್) ಲಭ್ಯವಾದಲ್ಲಿ ಸದರಿ ಕೆಂಪು ಕಲ್ಲನ್ನು ನಿಗದಿ ಪಡಿಸಿದ ರಾಜಧನವನ್ನು ಪಾವತಿಸಿ ವಿಲೇವಾರಿ ಮಾಡಲು ಅವಕಾಶವಿರುತ್ತದೆ. ಅದರಂತೆ, 2024-25ನೇ ಸಾಲಿನಲ್ಲಿ ಅನುಮತಿ ನೀಡಿದ್ದ 25 ಕಾರ್ಯಾದೇಶಗಳ ಪ್ರದೇಶದಲ್ಲಿ 9659 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ 11 ಕಾರ್ಯಾದೇಶ ಪ್ರದೇಶಗಳಲ್ಲಿ 9975 ಮೆಟ್ರಿಕ್ ಟನ್ ಗಳಷ್ಟು ಲಭ್ಯವಾದ ಕೆಂಪು ಕಲ್ಲುಗಳ ಸಾಗಾಣಿಕೆಗೆ ಪರವಾನಿಗೆಗಳನ್ನು ನೀಡಲಾಗಿರುತ್ತದೆ.

- **ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಮರಳು ಪೂರೈಕೆ ಸಂಬಂಧ :-**

- ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಕರಾವಳಿ ನಿಯಂತ್ರಣ ಹೊರತುಪಡಿಸಿದ (Non- CRZ) ಪ್ರದೇಶದ ವ್ಯಾಪ್ತಿಯಲ್ಲಿ 27 ಮರಳು ಗಣಿ ಗುತ್ತಿಗೆಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಲಾಗಿರುತ್ತದೆ.

- ಸರ್ಕಾರಿ ಕಾಮಗಾರಿಗಳ ಮರಳು ಪೂರೈಕೆಗಾಗಿ 05 ಮರಳು ಬ್ಲಾಕ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ.

- ಮೇಲ್ಕಂಡ ಒಟ್ಟು 32 ಮರಳು ಬ್ಲಾಕ್‌ಗಳಿಂದ 7,19,936 ಮೆಟ್ರಿಕ್ ಟನ್ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 2024-25ನೇ ಸಾಲಿನಲ್ಲಿ 74,846 ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಕೆ ಮಾಡಲಾಗಿರುತ್ತದೆ.

- ಪ್ರಸ್ತುತ, 2025-26ನೇ ಸಾಲಿನಲ್ಲಿ ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿರುವ 16 ಮರಳು ಗಣಿ ಗುತ್ತಿಗೆಗಳು ಮತ್ತು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ 03ಮರಳು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿದ್ದು, ಸದರಿ ಮರಳು ಗಣಿ ಗುತ್ತಿಗೆಗಳಿಂದ 4,07,697 ಮೆಟ್ರಿಕ್ ಟನ್ ಗಣಿಗಾರಿಕೆಗೆ ಲಭ್ಯವಿದ್ದು, 34,805 ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಕೆ ಮಾಡಲಾಗಿರುತ್ತದೆ.

- ಮುಂದುವರೆದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 16 ಎಂ-ಸ್ಯಾಂಡ್ ಉತ್ಪಾದನೆ ಮಾಡುವ ಸ್ಟೋನ್ ಕ್ರಷರ್ ಘಟಕಗಳಿದ್ದು, ಸದರಿ ಘಟಕಗಳಿಂದ 2024-25 ನೇ ಸಾಲಿನಲ್ಲಿ 1,16,741 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನ ಜುಲೈ ಅಂತ್ಯದವರೆಗೆ 1,34,706 ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ನ್ನು ಉತ್ಪಾದನೆ ಮಾಡಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಕೆ ಮಾಡಲಾಗಿರುತ್ತದೆ.

. . . 3

- ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 08.05.2023 ರಂದು ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ. ಸದರಿ ಕರಡು ಮಾರ್ಗಸೂಚಿಗಳಿಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಕರಡು ಮಾರ್ಗ ಸೂಚಿಗಳನ್ನು ಭಾರತ ಸರ್ಕಾರದಿಂದ ಅಂತಿಮಗೊಳಿಸಿ, ಅಧಿಸೂಚನೆ ಜಾರಿಯಾದ ನಂತರ ಜಿಲ್ಲಾ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸುತ್ತದೆ.

ಸಂಖ್ಯೆ ಸಿಐ-ಎಂಎಂಎನ್/211/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.